**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 155, ಹನುಮಂತನಗರ, ಬೆಂಗಳೂರು.**

ಸಂಖ್ಯೆ: ಸ.ಅ/ವಾ-155/ /2022-23 ದಿನಾಂಕ: 06-10-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 21-09-2020ರ ಆದೇಶದಂತೆ ದಿನಾಂಕ: 03-10-2022 ಶನಿವಾರ ವಾರ್ಡ್ ಸಂಖ್ಯೆ: 155, ಹನುಮಂತನಗರ ವಾರ್ಡ್ ಕಛೇರಿಯಲ್ಲಿ ನಡೆದ ಅಕ್ಟೋಬರ್ ತಿಂಗಳ 1ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ: ಬಿಬಿಎಂಪಿ ವಾರ್ಡ್ ಕಛೇರಿ, ಹರಿಹರಗುಡ್ಡ ಪಾರ್ಕ್, ಹನುಮಂತನಗರ,
ಸಮಯ: ಬೆಳಿಗ್ಗೆ 12.30 ಗಂಟೆಗೆ

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಶ್ರೀಮತಿ. ಉಮಾದೇವಿ ಎಂ ಬಳಿಗಾರ್, ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ. ಕೃಷ್ಣಮೂರ್ತಿ. ಟಿ, ಸಹಾಯಕ ಅಭಿಯಂತರರು (ಪ್ರಭಾರ)- ಸದಸ್ಯ ಕಾರ್ಯದರ್ಶಿ
3. ಶ್ರೀ. ಹರ್ಷಗೌಡ – ವಾರ್ಡ್ ಅಭಿಯಂತರರು
4. ಶ್ರೀ. ನಟರಾಜ್. (ಹಿ.ಆ.ಪ) – ಸದಸ್ಯರು
5. ಶ್ರೀಮತಿ. ಜ್ಯೋತಿ. ವಿ (ಕಂ.ಪ) – ಸದಸ್ಯರು
6. ಶ್ರೀ. ಉದಯ್ – ಸಾರ್ವಜನಿಕರು
7. ಶ್ರೀ. ಪಿಳ್ಳಪ್ಪ – ಸಾರ್ವಜನಿಕರು
8. ಶ್ರೀ. ಮೋಹನ್. ಬಿ.ಎನ್ – ಸಾರ್ವಜನಿಕರು
9. ಶ್ರೀ. ಕೆ.ಎಂ. ವೆಂಕಟೇಶ್ – ಸಾರ್ವಜನಿಕರು
10. ಶ್ರೀ. ಮಧುಸೂದನ್ – ಸಾರ್ವಜನಿಕರು
11. ಶ್ರೀ. ಸಿ. ಉಮೇಶ್ – ಸಾರ್ವಜನಿಕರು

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ. 155 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1) ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಡಾಂಬರೀಕರಣ ಮಾಡಿಕೊಡಲು ಕೋರಿರುತ್ತಾರೆ. ಈ ಸಂಬಂಧ ವಾರ್ಡ್ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಶೀರ್ಷಿಕೆ ಅಡಿಯಲ್ಲಿ ಹಾಗೂ ವಿಶೇಷ ಅನುದಾನದಡಿಯಲ್ಲಿ ರಸ್ತೆಗಳ ಡಾಂಬರೀಕರಣ ಕೈಗೊಂಡಿದ್ದು ಶೀಘ್ರದಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿರುತ್ತಾರೆ.



Scanned with CamScanner

2) ಸಭೆಯಲ್ಲಿ ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿನ ಪ್ರಮುಖ ಜಾಗಗಳಲ್ಲಿ ಉದಾಹರಣೆ. ಗವಿಗಂಗಾಧರೇಶ್ವರ ಮುಂಭಾಗ, ಮಾರುತಿ ವೃತ್ತ, ಬಂಡಿಮಹಾಕಾಳಮ್ಮ ದೇವಸ್ಥಾನದ ಹತ್ತಿರು ಇನ್ನೂ ಮುಂತಾದ ಸ್ಥಳಗಳಲ್ಲಿ ಹೈ ಮಾಸ್ಟ್ ದೀಪಗಳ ದುರಸ್ಥಿ ಮತ್ತು ಅಳವಡಿಕೆ ಬಗ್ಗೆ ಕೋರಿರುತ್ತಾರೆ. ಈ ಬಗ್ಗೆ ಸಂಬಂಧಿಸಿದವರಿಗೆ ತಿಳಿಸಿ ಕ್ರಮವಹಿಸುವುದಾಗಿ ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿರುತ್ತಾರೆ.

3) ಹನುಮಂತನಗರ ಬೃಹತ್ ಮಳೆನೀರುಗಾಲುವೆ ಮೇಲೆ ಹಾಕಲಾಗಿರುವ ಬೇಲಿ ಹಾಗೂ ಇತರ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲು ಸಾರ್ವಜನಿಕರು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿರುತ್ತಾರೆ.

4) ಬೆಸ್ಕಾಂ ಇಲಾಖಾ ವತಿಯಿಂದ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ಗಳ ಸುತ್ತಮುತ್ತ ಮತ್ತು ತಳಭಾಗದಲ್ಲಿ ಮಣ್ಣು ಕಸ ಇತ್ಯಾದಿ ತ್ಯಾಜ್ಯಗಳು ಸಂಗ್ರಹವಾಗುತ್ತಿದ್ದು ಅದನ್ನು ತೆರವುಗೊಳಿಸಿ ಶುಚಿತ್ವ ಕಾಪಾಡಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಬೆಸ್ಕಾಂ ಇಲಾಖೆಗೆ ಮಾಹಿತಿ ನೀಡಿ ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿಗಳು ವಾರ್ಡ್ ಅಭಿಯಂತರರಿಗೆ ಸೂಚಿಸಿರುತ್ತಾರೆ.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 155, ಹನುಮಂತನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 155, ಹನುಮಂತನಗರ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್.ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.



Scanned with CamScanner